# ಓದಲು ಕಷ್ಟಪಡುವ ಮಕ್ಕಳು

**ಕಮಲೇಶ್ ಚಂದ್ರ ಜೋಶಿ**

ಶಾಲೆಗಳಲ್ಲಿ, ಇತರ ಎಲ್ಲಾ ವಿಷಯಗಳ ಅಧ್ಯಯನಕ್ಕೆ, ಓದುವುದರ ಕಲಿಕೆಯೇ ಅಡಿಪಾಯವೆಂದು ಪರಿಗಣಿಸಲಾಗುತ್ತದೆ. ಬಹಳಷ್ಟು ಬಾರಿ ಕೆಲವು ಮಕ್ಕಳು ಓದುವ ಕೌಶಲವನ್ನು ಪಡೆಯದೆಯೇ ಹಿರಿಯ ಪ್ರಾಥಮಿಕ ತರಗತಿಗಳ ಹಂತವನ್ನು ತಲುಪುತ್ತಾರೆ ಮತ್ತು ಇದರ ಪರಿಣಾಮವಾಗಿ ಅವರು ಕಲಿಕೆಯಲ್ಲಿ ಹಿಂದುಳಯುತ್ತಾರೆ. ನಮ್ಮ ಶಾಲಾ ಭೇಟಿಯ ಸಮಯಗಳಲ್ಲಿ ಮಕ್ಕಳು ಓದಲು ಅಸಮರ್ಥರಾಗಿರುವುದನ್ನು ಕಳವಳದಿಂದಲೇ ಶಿಕ್ಷಕರು ಹಂಚಿಕೊಳ್ಳುತ್ತಾರೆ. "ದಯವಿಟ್ಟು ನಾವು ಏನು ಮಾಡಬಹುದೆಂದು ಹೇಳಿ" ಎನ್ನುವುದು ಅವರ ಅಳಲು. ಮಕ್ಕಳು ವೇಗವಾಗಿ ಓದುವಂತೆ ಮಾಡುವ ಒಂದು ಕಾರ್ಯತಂತ್ರವನ್ನು ಶಿಕ್ಷಕರು ಬಯಸುತ್ತಾರೆ. ವಾಸ್ತವದಲ್ಲಿ ಇದಕ್ಕೆ ವ್ಯವಸ್ಥಿತವಾದ ಯೋಜನೆ, ಸಮಯ ಮತ್ತು ನಿರಂತರ ಪರಿಶ್ರಮದ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ, ಒಂದು ಹಿರಿಯ ಪ್ರಾಥಮಿಕ ಶಾಲೆಯ, ಓದುವುದಕ್ಕೆ ಕಷ್ಟಪಡುತ್ತಿದ್ದ ಮಕ್ಕಳ ಒಂದು ಗುಂಪಿನೊಡನೆ ಕಾರ್ಯನಿರ್ವಹಿಸುವ ಶಿಕ್ಷಕರಿಗೆ ಬೆಂಬಲ ನೀಡುವ ಅವಕಾಶ ಕಳೆದ ವರ್ಷ ನಮಗೆ ದೊರೆಯಿತು. ಈ ಗುಂಪಿನ ಬಹಳಷ್ಟು ಮಕ್ಕಳು ಆಗಲೇ ಆರು ಮತ್ತು ಏಳನೇ ತರಗತಿಗಳನ್ನು ತಲುಪಿದ್ದರೂ ಓದುವ ಮೂಲ ಕೌಶಲಗಳಿಲ್ಲದೆಯೇ ಕಷ್ಟಪಡುತ್ತಿದ್ದರು. ಅವರಲ್ಲಿ ಇಬ್ಬರು ಬಹಳ ಹಿಂದುಳದಿದ್ದರು. ಅವರಿಗೆ ಅಕ್ಷರಗಳನ್ನು ಮತ್ತು ಕಾಗುಣಿತಗಳನ್ನು ಗುರುತಿಸಲು ಕೂಡಾ ಆಗುತ್ತಿರಲಿಲ್ಲ. ಅವರಿಬ್ಬರಲ್ಲಿ, ಒಂದು ಹುಡುಗಿಗೆ ಮಾತನಾಡಲು ಬರುತ್ತಿರಲಿಲ್ಲ ಮತ್ತು ಆಕೆ ನಿಯಮಿತವಾಗಿ ಶಾಲೆಗೂ ಬರುತ್ತಿರಲಿಲ್ಲ. ಅವಳು ತನ್ನ ಪಠ್ಯಪುಸ್ತಕದಿಂದ ಒಂದು ಅಧ್ಯಾಯವನ್ನು ನಕಲು ಮಾಡುತ್ತಿದ್ದಳು ಮತ್ತು ಅದೇ ಕಲಿಕೆ ಅಥವಾ ಶಾಲೆಯಲ್ಲಿನ ಕೆಲಸ ಎಂದು ಭಾವಿಸಲಾಗಿತ್ತು. ಆದರೆ ಅವಳಿಗೆ ಪುಸ್ತಕದ ಯಾವುದೇ ಪದಗಳನ್ನು ಓದಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಅಕ್ಷರ, ಕಾಗುಣಿತಗಳನ್ನು ಸಮರ್ಪಕವಾಗಿ ಗುರುತಿಸಲು ಬರುತ್ತಿರಲಿಲ್ಲ. ಮತ್ತೊಬ್ಬ ಹುಡುಗನಿಗೆ ಕೇವಲ ತನ್ನ ಮತ್ತು ತನ್ನ ಮನೆಯವರ ಹೆಸರುಗಳು ಮಾತ್ರ ಪರಿಚಿತವಾಗಿದ್ದವು. ಅವನಿಗೂ ಅಕ್ಷರ, ಕಾಗುಣಿತಗಳ ಪರಿಚಯವಿರಲಿಲ್ಲ. ಅವನಿಗೆ ಇಂದು ಏನನ್ನಾದರೂ ಕಲಿಸಿದ್ದರೆ–ಮಾರನೆಯ ದಿನ ಮರೆಯುವಂಥ ಮತ್ತೊಂದು ತೊಂದರೆಯನ್ನು ಆತ ಎದುರಿಸುತ್ತಿದ್ದ. ಈ ಬಗೆಯಲ್ಲಿ ಈ ಎರಡೂ ಮಕ್ಕಳು ಓದುವ ವಿಷಯದಲ್ಲಿ ನಿಜವಾಗಿಯೂ ಕಷ್ಟಪಡುತ್ತಿದ್ದರು. ಉಳಿದ ಮಕ್ಕಳು ಬೇರೆಬೇರೆಯ ಹಂತಗಳಲ್ಲಿದ್ದರು.

ನಾವು ಅವರೊಡನೆ ಕೆಲಸ ಮಾಡಲು ಪೂರ್ಣಪ್ರಮಾಣದ ಯೋಜನೆಯೊಂದನ್ನು ತಯಾರಿಸಿದೆವು. ಅಕ್ಷರ ಮತ್ತು ಕಾಗುಣಿತಗಳನ್ನು ಕಲಿಯುವುದರ ಜೊತೆಗೆ ಮಕ್ಕಳು, ಮಕ್ಕಳ ಸಾಹಿತ್ಯದ ಕೆಲವು ಸಣ್ಣ ಪುಸ್ತಕಗಳ ಓದಿಗೂ ತೆರೆದುಕೊಳ್ಳಬೇಕು ಎಂದು ನಿರ್ಧರಿಸಲಾಯಿತು. ಅವರಿಗೆ ನಾವು ಈ ಪುಸ್ತಕಗಳನ್ನು ಓದಿ ಹೇಳುವುದು ಮತ್ತು ಓದುವಾಗಲೇ ಅದರ ಬಗ್ಗೆ ಚರ್ಚೆಯನ್ನು ನಡೆಸುವುದೆಂದು ನಿರ್ಧರಿಸಲಾಯಿತು. ಅಕ್ಷರಗಳು, ಕಾಗುಣಿತ ಮತ್ತು ಪದಗಳನ್ನು ಗುರುತಿಸುವ ಅಭ್ಯಾಸಕ್ಕಾಗಿಯೂ ಈ ಪುಸ್ತಕಗಳನ್ನು ಉಪಯೋಗಿಸಲಾಯಿತು. ಎನ್‌ಸಿಇಆರ್‌ಟಿ ಅವರು ಪ್ರಕಟಿಸಿರುವ ಬರ್ಕಾ ಸರಣಿಯ ಪುಸ್ತಕಗಳು ಮತ್ತು ಇಂತಹ ಇತರ ಮಕ್ಕಳ ಪುಸ್ತಕಗಳು ಮಕ್ಕಳ ದೈನಂದಿನ ಅನುಭವಕ್ಕೆ ಹತ್ತಿರವಾಗಿರುವುದರಿಂದ ಸಮಂಜಸವೆಂದು ಕಂಡುಕೊಂಡೆವು. ಈ ಪುಸ್ತಕಗಳನ್ನು ಮಕ್ಕಳಿಗೆ ಜೋರಾಗಿ ಓದಿ ಹೇಳಲಾಯಿತು ಮತ್ತು ಆ ಬಳಿಕ ಪುಸ್ತಕದ ಬಗ್ಗೆ ಚರ್ಚೆಯನ್ನು ನಡೆಸಲಾಯಿತು. ಈ ಸಂವಾದದಲ್ಲಿ ಮಕ್ಕಳು ತಮ್ಮ ದೈನಂದಿನ ಅನುಭವಗಳನ್ನು ಹಂಚಿಕೊಂಡರು. ಕಥೆಗಳನ್ನು ಮತ್ತು ಪದ್ಯಗಳನ್ನು ಕರಿಹಲಗೆಯ ಮೇಲೆ ಬರೆಯಲಾಯಿತು ಮತ್ತು ಮಕ್ಕಳಿಗೆ ಅವನ್ನು ಓದಲು ಹೇಳಲಾಯಿತು. ಇದನ್ನು ಪದ ಮತ್ತು ಕಾಗುಣಿತಗಳನ್ನು ಗುರುತಿಸಲು ಬಳಸಲಾಯಿತು. ಅವರು ಗುರುತಿಸಲು ಸಾಧ್ಯವಾಗುವಂಥ ಪದಗಳಿಂದ ಆರಂಭಿಸಿ ಅದೇ ರೀತಿಯ, ಉದಾಹರಣೆಗೆ ರೋಟಿ ಪದದಿಂದ ಛೋಟಿ ಮತ್ತು ಮೋಟಿ ಪದಗಳಂತೆ ಸಮಾನಾಂತರ ಪದಗಳನ್ನು ರಚಿಸುವಂತೆ






ಹೇಳಲಾಯಿತು. ಜೊತೆಗೆ ಅವರ ಅನುಭವಗಳನ್ನು ಬರೆಯಲು ಮತ್ತು ಅವರಿಗೆ ಇಷ್ಟವಾದುದನ್ನು ಆಲೋಚಿಸಿ ವಾಕ್ಯಗಳಲ್ಲಿ ಬರೆಯಲು ಹೇಳಲಾಯಿತು.

ಈ ಪ್ರಕ್ರಿಯೆಯಲ್ಲಿ ಮಕ್ಕಳು ಅಕ್ಷರ, ಕಾಗುಣಿತಗಳನ್ನು ಕಲಿಯಲು ತುಸು ಹೆಚ್ಚು ಸಮಯ ತೆಗೆದುಕೊಂಡರೂ ಈಗ ಓದಲು ಪ್ರಾರಂಭಿಸಿದರು. ಅವರೀಗ ಮುಂದಿನ ಹಂತವನ್ನು ತಲುಪಿದ್ದಾರೆ. ಇನ್ನು ಸ್ವಲ್ಪ ದಿನಗಳಲ್ಲಿ ಸರಾಗವಾಗಿ ಓದಲು ಕಲಿಯುತ್ತಾರೆ ಎಂಬ ಭರವಸೆ ಮೂಡಿತು. ಇದೇ ರೀತಿ ಈ ಗುಂಪಿನ ಇತರ ಮಕ್ಕಳೂ, ಯಾರು ತಡೆದು ತಡೆದು ಓದುತ್ತಾರೋ ಅವರೂ ಕೂಡ ಮಕ್ಕಳ ಪುಸ್ತಕಗಳ ಸಹಾಯದಿಂದ ಚೆನ್ನಾಗಿ ಓದುವ ವೇಗವನ್ನು ಸುಧಾರಿಸುತ್ತಿದ್ದಾರೆ. ಜೊತೆಗೆ ಅವರು ಬರೆಯುವುದನ್ನೂ ಅಭ್ಯಾಸ ಮಾಡುತ್ತಿದ್ದಾರೆ. ಈಗ ಈ ಎಲ್ಲಾ ಮಕ್ಕಳು ತರಗತಿಯ ಮುಖ್ಯವಾಹಿನಿಯೊಂದಿಗೆ ಸೇರಬಲ್ಲರು ಮತ್ತು ಇತರ ವಿಷಯಗಳನ್ನು ಕಲಿಯಲು ಕೂಡ ಸಮರ್ಥರಾಗುತ್ತಾರೆ ಎಂದು ತೋರುತ್ತದೆ.

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ, ಪ್ರತಿ ಶಾಲೆಯಲ್ಲಿ ಓದಲು ಬರೆಯಲು ಕಷ್ಟಪಡುವ ಇಂತಹ ಹಲವಾರು ಮಕ್ಕಳಿದ್ದು, ಅದರಿಂದಾಗಿಯೇ ವ್ಯವಸ್ಥೆಯ ಮುಖ್ಯವಾಹಿನಿಯಿಂದ ಅವರು ಹೊರಗುಳಿಯುತ್ತಾರೆ ಎಂಬುದು ಓದಲು ಕಷ್ಟಪಡುತ್ತಿರುವ ಮಕ್ಕಳೊಡನೆ ಕೆಲಸ ಮಾಡುತ್ತಾ ನಮಗೆ ಅರಿವಾಯಿತು. ಬಹಳಷ್ಟು ಶಾಲೆಗಳಲ್ಲಿ ಶಿಕ್ಷಕರು ಯಾವ ಮಕ್ಕಳು ಓದಲು ಕಷ್ಟಪಡುತ್ತಾರೆ ಎಂದು ಕಂಡುಹಿಡಿದರೂ, ಅದಕ್ಕೆ ಅಗತ್ಯ ಬೆಂಬಲ ನೀಡುವ ವ್ಯವಸ್ಥಿತ ಮಧ್ಯಪ್ರವೇಶ ಯೋಜನೆಗಳನ್ನು (Systematic intervention plan) ರೂಪಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿಯೇ ಸಮಸ್ಯೆ ಮುಂದುವರೆಯುತ್ತದೆ. ಇಂತಹ ಮಕ್ಕಳೊಡನೆ ಕೆಲಸ ಮಾಡಲು ನಾವು ವ್ಯವಸ್ಥಿತವಾದ ಒಂದು ಯೋಜನೆಯನ್ನು ರೂಪಿಸಬೇಕಾದ ಅಗತ್ಯವಿದೆ. ಇದಕ್ಕೆ ಮಕ್ಕಳು ತಮ್ಮ ಬದುಕಿನ ಅನುಭವಗಳೊಡನೆ ಸಮೀಕರಿಸಿಕೊಳ್ಳಲು ಸಾಧ್ಯವಾಗುವಂಥ ಸೂಕ್ತ ಸಂಪನ್ಮೂಲ ಪರಿಕರಗಳ ಅಗತ್ಯವಿದೆ. ಪದಗಳು ಮತ್ತು ಅಕ್ಷರಗಳನ್ನು ಗುರುತಿಸಲು ಕೂಡ ಈ ರೀತಿಯ ಪರಿಕರಗಳನ್ನು ಉಪಯೋಗಿಸ-ಬಹುದು. ಈ ಮಧ್ಯಪ್ರವೇಶ ಯೋಜನೆಯಲ್ಲಿ ಮಕ್ಕಳಿಗೆ ಅರ್ಥಪೂರ್ಣವಾದ ಓದುವ ಅನುಭವವನ್ನು ನೀಡುವುದು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರೆ ಎಲ್ಲ ಮಕ್ಕಳೂ ಓದಲು ಶಕ್ತರಾಗುತ್ತಾರೆ ಮತ್ತು ಜ್ಞಾನಪ್ರಪಂಚದಲ್ಲಿ ಭಾಗವಹಿಸಲು ಸಮರ್ಥರಾಗುತ್ತಾರೆ.



**ಕಮಲೇಶ್ ಚಂದ್ರ ಜೋಶಿ** ಅವರು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಸಕ್ರಿಯರಾಗಿದ್ದಾರೆ. ಪ್ರಾಥಮಿಕ ಸಾಕ್ಷರತೆ, ಶಿಕ್ಷಕ ಶಿಕ್ಷಣ ಮತ್ತು ಮಕ್ಕಳ ಸಾಹಿತ್ಯದಂಥ ಶಿಕ್ಷಣ ಸಂಬಂಧಿ ಕ್ಷೇತ್ರದಲ್ಲಿ ಆಸಕ್ತರಾಗಿದ್ದಾರೆ. ಪ್ರಸ್ತುತ ಅವರು ಉತ್ತರಾಖಂಡದ ಉಧಾಮ್ ಸಿಂಗ್ ನಗರದ ಅಜೀಂ ಪ್ರೇಮ್‌ಜಿ ಜಿಲ್ಲಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರನ್ನು kamlesh@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ದನ ಚನ್ನಗಿರಿ** । ಪರಿಶೀಲನೆ: **ನಾಗಮಣಿ ಎಸ್ ಎನ್**

ಒಂದು ಮಗುವು ಶಾಲೆಯ ಹೊಸ್ತಿಲನ್ನು ದಾಟಿದಾಗ, ಕೇವಲ ಪಾಟಿಚೀಲ, ಸ್ಲೇಟ್–ಬಳಪ, ಪುಸ್ತಕ, ನೋಟ್ ಪುಸ್ತಕ ಇವುಗಳನ್ನಷ್ಟೇ ಶಾಲೆಗೆ ಹೊತ್ತು ತರುವುದಿಲ್ಲ, ಜೊತೆಗೆ ಅದರ ಸಂಪೂರ್ಣ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ಅದರ ತುಂಬಿದ ಇಲ್ಲವೇ ಖಾಲಿ ಹೊಟ್ಟೆ, ಅದರ ಕುತೂಹಲಗಳು, ಅದರ ಆತಂಕಗಳು, ಹಿಂಜರಿಕೆಗಳು, ತಾಯ್ನುಡಿ ಮತ್ತು ಇತರೆಲ್ಲ ಮುಖಗಳನ್ನೂ ಹೊತ್ತು ತರುತ್ತದೆ ಮತ್ತು ಈ ಮಗು ಶಿಕ್ಷಣ ವ್ಯವಸ್ಥೆಗೆ ಯಾವುದೇ ರೀತಿಯಲ್ಲಿ ತೆರೆದುಕೊಂಡಿರದ ಅಥವಾ ಸಂಬಂಧ ಹೊಂದಿರದ ಕುಟುಂಬದಿಂದ ಬಂದರೆ ಶಾಲೆ ಮತ್ತು ಶಿಕ್ಷಕರು ಅಂತಹ ಮಗುವಿನೊಡನೆ ಹೆಚ್ಚಿನ ನಮ್ಯತೆಯನ್ನು ತೋರಬೇಕಾಗುತ್ತದೆ.

ಅನಂತ್ ಗಂಗೋಲ, ಎಲ್ಲರಿಗೂ ಶಿಕ್ಷಣ, ಪು. 7